ಸತ್ತ ವ್ಯಕ್ತಿ ಕುರ್ಚಿಯಲ್ಲಿ ಕುಳಿತ ಹಾಗೆಯೇ ಪ್ರಾಣ ತೊರೆದಿದ್ದಾನೆ. ಗುಂಡು ಅವನ ಬಲ ಕಿವಿಯ ಕೊಂಚ ಮೇಲುಗಡೆಯಿಂದ ನುಗ್ಗಿ ಇನ್ನೊಂದು ಬದಿಯಿಂದ ಹೊರಬಂದಿದೆ. ಗುಂಡಿನ ರಭಸಕ್ಕೆ ತಲೆ ಛಿದ್ರವಾಗಿದೆ. ರಕ್ತ ಎಲ್ಲಕಡೆ ಚಿಮ್ಮಿ ಇಡೀ ಹಾಲ್ ರಕ್ತಮಯವಾಗಿದೆ. ರಕ್ತದ ಹನಿಗಳು ರಾಕೇಶನ ಬಟ್ಟೆಗಳ ಮೇಲೂ ಬಿದ್ದಿದ್ದು, ಆ ವ್ಯಕ್ತಿಯ ಸಾವು ಸಂಭವಿಸಿದಾಗ ರಾಕೇಶ್ ಅವನ ಹತ್ತಿರವೇ ಇದ್ದಿರಬಹುದು ಎನ್ನುವ ಸುಳಿವು ಕೊಡುತ್ತಿದೆ.

'ಅಷ್ಟು ಭಯಾನಕ ಸಾವು ತನ್ನ ಮುಂದೆಯೇ ಆಗಿದ್ದು ನೋಡಿ ರಾಕೇಶ್ ಭಯ ಪಟ್ಟಿರುವುದು ಸಹಜ. ಆದರೆ ಅವನೇ ಕೊಲೆ ಮಾಡಿದ್ದರೆ ರಾಕೇಶನಷ್ಟು ಉತ್ತಮ ನಾಟಕಕಾರ ಯಾರೂ ಇಲ್ಲ' ಎಂದೆನಿಸಿತು ಇನ್‌ಸ್ಪೆಕ್ಟರ್ ನಾಗೇಶನಿಗೆ.

ಕೃಷ್ಣನ್ ಸತ್ತು ಬಿದ್ದಿದ್ದ ಕೋಣೆಯಲ್ಲಿ ಪುಸ್ತಕಗಳು, ಅವಾರ್ಡ್‌ಗಳು, ಮೆಡಲ್‌ಗಳು ತುಂಬಿದ್ದವು. ಎಲ್ಲವನ್ನೂ ನೀಟಾಗಿ ಜೋಡಿಸಿಡಲಾಗಿತ್ತು. ಅಷ್ಟು ದೊಡ್ಡ ಕೋಣೆ ಎಲ್ಲಿಯೂ ಒಂದೇ ಒಂದು ದೂಳಿನ ಕಣ ಕೂಡ ಕಾಣದಷ್ಟು ಸ್ವಚ್ಛವಾಗಿತ್ತು.

'ನೀವು ಇಲ್ಲಿಗೆ ಎಷ್ಟು ಹೊತ್ತಿಗೆ ಬಂದಿರಿ ರಾಕೇಶ್?'

'ಸರ್, ಇವತ್ತು ಬೆಳಗ್ಗೆ ಒಂಬತ್ತು ಮುವತ್ತಕ್ಕೆ ನನ್ನ ಮೊಬೈಲ್‌ಗೆ ಫೋನ್ ಮಾಡಿದ್ದರು. ಹಾಗಾಗಿ ನಾನು ಬ್ಯಾಂಕ್‌ಗೆ ಹೋಗಿ, ಹಾಜರಿ ಹಾಕಿ, ಸುಮಾರು ಹತ್ತು ಗಂಟೆಗೆ ಇಲ್ಲಿಗೆ ಬಂದೆ' ನಡುಗುತ್ತಲೇ ಹೇಳಿದ ರಾಕೇಶ್.

'ಹತ್ತು ಗಂಟೆಗೆ ಬಂದ್ರಿ... ಈಗ ಎರಡು ಗಂಟೆ... ಘಟನೆ ನಡೆದು ಒಂದು ಗಂಟೆ ಆಗಿರಬಹುದು... ಅಂದರೆ ಹತ್ತು ಗಂಟೆಯಿಂದ ಒಂದು ಗಂಟೆಯವರೆಗೆ ನೀವು ಇಲ್ಲಿ ಏನು ಮಾಡ್ತಾ ಇದ್ರಿ?'

ಒಂದು ಕೇಸ್ ಬಗೆಹರಿಯಬೇಕಾದರೆ ಅದರ ಇನ್ವೆಸ್ಟಿಗೇಶನ್ ಆಫೀಸರ್‌ಗೆ ತನ್ನೆಲ್ಲ ಬುದ್ಧಿಬಲ, ಒತ್ತಡ, ಪ್ರಭಾವವನ್ನು ಬಳಸಬೇಕಾಗುತ್ತದೆ. ಆದರೆ ಆ ಯುಕ್ತಿಗಳು ಸಮಯದ ವಿರುದ್ಧವೇ ಕೆಲಸ ಮಾಡಬೇಕು. ಒಂದು ಸಣ್ಣ ತಪ್ಪು ಹೆಜ್ಜೆ ಕೂಡ ಅವನನ್ನು ನಿಜವಾದ ಅಪರಾಧಿಯಿಂದ ದೂರ ಕರೆದೊಯ್ಯುತ್ತದೆ. ನಾಗೇಶನಿಗೆ ಇದರ ಅರಿವಿತ್ತು. ಘಟನೆ ನಡೆದ ಸ್ಥಳದಲ್ಲಿಯೇ, ಒಬ್ಬ ವ್ಯಕ್ತಿ ಸಂಶಯಾಸ್ಪದವಾಗಿ ಸಿಕ್ಕರೂ, ಅವನು ಕೇವಲ ಆರೋಪಿ ಅಷ್ಟೇ! ಇದನ್ನು ಚತುರತೆಯಿಂದ ನಿರ್ವಹಿಸಬೇಕು. ಆಗ ಮಾತ್ರ ಗೆಲ್ಲಬಹುದು. ಈಗಿನ ಸಂಚುಕೋರರಿಗೆ ಪೊಲೀಸರ ಕಾರ್ಯವಿಧಾನಗಳು ಗೊತ್ತಿರುವುದರಿಂದ, ಹೇಗೆ ಆರೋಪದಿಂದ ತಪ್ಪಿಸಿಕೊಳ್ಳಬೇಕು ಎನ್ನುವುದನ್ನು ತಿಳಿದುಕೊಂಡೇ ಇಂತಹ ಕೃತ್ಯಕ್ಕೆ ಕೈ ಹಾಕುವ ಸಾಧ್ಯತೆಗಳು ಇರುತ್ತವೆ. ಆದರೂ ಅವನ ಮನದ ಯಾವುದೋ ಮೂಲೆಯಲ್ಲಿ 'ರಾಕೇಶ್ ನಿಜ ಹೇಳುತ್ತಿದ್ದಾನಾ?' ಎನ್ನುವ ಪ್ರಶ್ನೆ ಕೂಡ ಇತ್ತು.

'ಸರ್, ಬಂದ ಹತ್ತು ನಿಮಿಷಕ್ಕೇ ನನ್ನ ಕೆಲಸ ಮುಗಿದಿತ್ತು. ನಾನು ಹೊರಡುವೆ ಎಂದು ಎದ್ದಾಗ, ನನ್ನನ್ನು ಕುಳ್ಳಿರಿಸಿ, ತಮ್ಮೊಡನೆ ಚದುರಂಗದಾಟ ಆಡುವಂತೆ ಕೇಳಿಕೊಂಡರು. ನಾನು, ಸಮಯವೂ ಇಲ್ಲ, ನನಗೆ ಚದುರಂಗ ಆಡಲೂ ಅಷ್ಟಾಗಿ ಬರುವುದಿಲ್ಲ ಎಂದು ಹೇಳಿದರೂ ಕೇಳಲಿಲ್ಲ. ತನ್ನನ್ನು ಮೂರೂ ಆಟಗಳ ಪಂದ್ಯದಲ್ಲಿ ಸೋಲಿಸಿದರೆ ನಾನು ಕೇಳಿದ್ದು ಕೊಡುತ್ತೇನೆ ಎಂದರು. ನಾನು ತಮಾಷೆಗೆ ಐದು ಕೋಟಿ ಕೊಡುತ್ತಿರಾ ಅಂತಾ ಕೇಳಿದೆ, ಒಪ್ಪಿಕೊಂಡು ಬಿಟ್ಟರು. ನನ್ನ ಅದೃಷ್ಟವೋ ಅಥವಾ ದುರದೃಷ್ಟವೋ ನಾನು ಎರಡು ಆಟದಲ್ಲಿ ಗೆದ್ದು ಬಿಟ್ಟೆ. ಮಾತಿನಂತೆ ನನ್ನ ಅಕೌಂಟ್‌ಗೆ ಐದು ಕೋಟಿ ವರ್ಗಾವಣೆ ಮಾಡಿದರು ಕೂಡಾ...'